ದಿನ ಪತ್ರಿಕೆ
Reg No. M 129
Daily & Weekly
For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 319] ಗುರುವಾರ 24 —6—1943 [3 ಪೈ

ಹೆಚ್. ಆರ್. ಜಿ. ಸಿ. ಯವರ
ಶ್ರೀ ವಿ ಕ ರ್
ಬ ನ
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಬರಲಿದೆ

ಅಮೇರಿಕಾದಲ್ಲಿ ೧ ಕಪ್ಪು ಬಿಳಿ ಜನರ ದೊಂಬಿ

ಅಮೇರಿಕಾದ ಡೆಟ್ರಾಯಿಟ್ಟಿನಲ್ಲಿ ಜಾತಿ ಸಂಬಂಧದ ಗಲಭೆಯಾ ನೀಗ್ರೋ ಬೆಳೀಜನರಿಗೆ ಹೊಡೆದಾಟ ನಡೆದು 23 ಮಂದಿ ಸತ್ತರು ಮತ್ತು 700 ಮಂದಿ ಗಾಯಗೊಂಡರು. ಅಲ್ಲಿ ಈಗ ಮಾರ್ಷಲ್ ಲಾ ಜಾರಿಯಲ್ಲಿದೆ. 1300 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಹೆನ್ರಿ ಕೈಜರರ ಯುಕ್ತಿ

ಈಗ ಅಮೇರಿಕಾದಲ್ಲಿ ಪ್ರತಿ ದಿವಸವೂ 45 ನೌಕೆಗಳನ್ನು ತಯಾರಾಗುತ್ತಿರುವ ಹೆನ್ರಿ ಕೈಜರನು ಯುದ್ಧ ಮುಗಿದ ಮೇಲೆ ತನಗೆ ಈಗಿನಂತೆ ಕೆಲಸ ಸಿಕ್ಕಲಾರದೆಂದು ತನ್ನ ಕೆಲಸಗಾರರಿಗೆ ಮುಂದೆ ಕೆಲಸ ಕೊಡಲು ಒಂದು ಉಪಾಯವನ್ನು ಕಂಡುಹಿಡಿದಿದ್ದಾನೆ. ಪ್ರತೀ ಮನೆಯನ್ನು ಬೇರೆಬೇರೆ ಭಾಗವಾಗಿ ತಯಾರ್ಮಾಡುವುದು, ಇದನ್ನು ರೈಲಿನಲ್ಲಾಗಲೀ ವಿಮಾನದಲ್ಲಾಗಲೀ ಗಾಡಿಗಳಲ್ಲಾಗಲೀ ಸುಲಭವಾಗಿ ಸಾಗಿಸುವಂತೆ ಮಾಡುವನಂತೆ. ಅದರಿಂದ 1–2 ಗಂಟೆಗಳಲ್ಲಿ ಎಲ್ಲಿಬೇಕಾದರೂ ಮನೆಯನ್ನು ನಿರ್ಮಿಸಬಹುದಂತೆ. ಸಮುದ್ರ ತೀರದಲ್ಲಿ ವಾಸಿಸಲು ಅನುಕೂಲವಾಯಿತು. ಖಾಯಿಲೆಯವರು ಎತ್ತರವಾದ ಸ್ಥಳಗಳಲ್ಲಿ ಮನೆಕಟ್ಟಿಕೊಳ್ಳಬಹುದು, ಜಮೀನ್ದಾರರು ಸುಗ್ಗಿಕಾಲದಲ್ಲಿ ತಮ್ಮ ಜಮೀನುಗಳಲ್ಲಿ ಕಟ್ಟಿಕೊಳ್ಳಬಹುದು. ಬೆಲೆಯೂ ಸ್ವಲ್ಪವಂತೆ

ಬೆಲೂಕೀ ಸಮೀಪದಲ್ಲಿ ರಷ್ಯಾ ಜರ್ಮನಿಗಳಿಗೆ ಘೋರವಾದ ಯುದ್ಧವು ನಡೆಯುತ್ತಿರುವುದು.

ಈಗಿನ ಏರ್ಪಾಡಿನಂತೆ ಜನರಲ್ ಜೀರೋನವರು ಉತ್ತರ ಮತ್ತು ಪಶ್ಚಿಮ ಆಫ್ರಿಕಾ ಆಡಳಿತವನ್ನು ನೋಡಿಕೊಳ್ಳುವರೆಂದೂ. ಇತರ ಫ್ರೆಂಚ್ ಸ್ವಾತ್ಯೆಗಳ ಆಡಳಿತವನ್ನು ಜನರಲ್ ಡಿಗಾಲರು ನೋಡಿಕೊಳ್ಳುವರೆಂದೂ ನಿರ್ಧಾರವಾಗಿದೆ

ಜರ್ಮನರು ರಷ್ಯಾದವರ ಮೇಲೆ ಯುದ್ಧಹೂಡಿ ಮೊನ್ನೆ ಸೋಮವಾರಕ್ಕೆ ಎರಡು ವರ್ಷ ತುಂಬಿ ಮೂರನೇ ವರ್ಷ ನಡೆಯುತ್ತಿದೆ. ಈ ಎರಡು ವರ್ಷಗಳಲ್ಲಿ ಜರ್ಮನರಿಗೆ 64 ಲಕ್ಷ ಸೈನ್ಯ ನಷ್ಟವಾಗಿದೆಯೆಂದೂ ರಷ್ಯಾದವರಿಗೆ 42 ಲಕ್ಷ ಮಾತ್ರವೆಂದೂ ಹೇಳಲಾಗಿದೆ.

ಚಿಂತ್ಯಲ್ಟರಿನಿಂದ ಮತ್ತೆ ಅನೇಕ ನೌಕೆಗಳು ಉತ್ತರ ಆಫ್ರಿಕಾಕ್ಕೆ ಹೊರಟವೆಂದೂ ಅವೆಲ್ಲಾ ಅಲ್ಜೀರಿಯಾ ಕೊಲ್ಲಿಯಲ್ಲಿ ಕಂಗಿರುವವೆಂದೂ ಜರ್ಮನರು ಹೇಳಿತ್ತಿರುವರು,

ಬರ್ಮಾ ಯುದ್ಧವು ಮಳೆಯು ಮುಗಿಯುವವರಿಗೂ ಏನೂ ಮಾಡಲಾಗುವುದಿಲ್ಲ. ಅರಕಾನ್‌ನಲ್ಲಿ ಮಿತ್ರರಿಗೆ ಆದುದು ಅಪಜಯವೆಂದು ಹೇಳಲಾಗುವುದಿಲ್ಲ. ಅರಕಾನ್ ಮುಖಾಂತರ ಬರ್ಮಾ ಮೇಲೆ ನುಗ್ಗಲು ಆಗುವುದಿಲ್ಲ. ಅಲ್ಲಿ ಬೆಟ್ಟ ಗುಡ್ಡ ಕಾಡು ಕೊಚ್ಚೆ ಇವುಗಳಿಂದ ತುಂಬಿಹೋಗಿದೆ. ಬರ್ಮಾಕ್ಕೆ ರಂಗೂನ್ ಮುಖ್ಯ. ಆದ್ದರಿಂದ ಸಮುದ್ರದಿಂದಲೇ ಶತ್ರುವನ್ನು ನಾಶಮಾಡಬೇಕು. ಅಸ್ಸಾಂನಿಂದ ಬರ್ಮಾ ಮೇಲೆ ನುಗ್ಗಲು ಸೇತುವೆ ರಸ್ತೆ ಇವುಗಳನ್ನು ತಯಾರ್ಮಾಡಬೇಕಾಗಿದೆ.

ಎಲ್ಲಾ ವಾರ್ತೆಗಳು

ಈಗ 3 ದಿವಸದ ಕೆಳಗೆ ಮಿತ್ರರು ಇಟಲಿಯಲ್ಲಿರುವ ಸಲೋಸಾ ಮೇಲೆ ಧಾಳಿ ಮಾಡಿದ್ದರಷ್ಟೆ. ಆಗ ಉಂಟಾದ ಅಗ್ನಿಜ್ವಾಲೆಯು ಇನ್ನೂ ಉರಿಯುತ್ತಲೇ ಇರುವುದಂತೆ !

ಕಪ್ಪುರ್ಥಾಲಾ ಸರಕಾರದವರು ತಮ್ಮ ಪ್ರಜೆಗಳು ದವಸಗಳನ್ನು ಕೊಳ್ಳಲು 3 ತಿಂಗಳು ಸಂಬಳವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ.

ಅಮೇರಿಕಾದಲ್ಲಿ ಮಿಲಿಟರಿಯವರ ವಯಸ್ಸನ್ನು 65 ಕ್ಕೆ ಏರಿಸುವುದಾಗಿ ಮಿ॥ ರೂಸ್‌ವೆಲ್ಟರು ಹೇಳಿರುವರು.

ಏರ್‌ಲಿಂಡಿನಲ್ಲಿ ಜುನಾವಣೆ ನಡೆಯುತ್ತಿರುವುದು. ಈಗಾದ ಓಟಿನ ಎಣಿಕೆಯಲ್ಲಿ ಮಿ ಡಿವಿಲಾರವರಿಗೆ ಹೆಚ್ಚು ವೋಟು ಒಂದಿದೆ ಇನ್ನೂ ಎಣಿಕೆ ನಡೆಯುತ್ತಲೇ ಇದೆ.

ಆಸ್ಟ್ರೇಲಿಯಾ ಸರ್ಕಾರದಲ್ಲಿ ಈಗಿರುವ ವಂತ್ರಿ ಮಿ॥ ಕರ್ಟಿನ್ನರಲ್ಲಿ ಅವಿಶ್ವಾಸನವನ್ನು ಸೂಚಿಸುವ ಠರಾವನ್ನು ಎದುರು ಪಾರ್ಟಿಯವರು ತಂದು ಒಂದು ವೋಟಿನಿಂದ ಪರಾಜಿತರಾದರು.

ಚೀನಾದಲ್ಲಿ ಯಾಂಗಟೀಸ್ ನದಿಯ ತೀರದಲ್ಲಿ ಈಗ ಜಪಾನಿಯರ ಕೈಯಲ್ಲಿರುವ ಹುಷಾ ನಗರವನ್ನು ಚೀನೀಯರು ಮುತ್ತಿರುವರು

ತರ್ಕಿಯು ಇಸ್ತಂಬೂಲಿಗೆ 60 ಮೈಲಿ ಪೂರ್ವದಲ್ಲಿರುವ ಅತಬಜಾರ್ ಸೆಗರದಲ್ಲಿ ಭೂಕಂಪವಾಗಿ 15 ಸಾವಿರ ಜನ ಸತ್ತರೆಂದೂ ಅಲ್ಲಿ ವಾಸವಾಗಿದ್ದವರು 24 ಸಾವಿರವೆಂದೂ ಹೇಳಲಾಗಿದೆ.

ನಿನ್ನೇ ದಿವಸ ಬ್ರಿಟನ್ನಿನಿಂದ 700 ಕ್ಕೆ ಮೀರಿದಷ್ಟು ವಿಮಾನಗಳು ಹೊರಟು ಜರ್ಮನಿಯ ಅಗ್ನೇಯದ ಕಡೆಗಳಲ್ಲಿ ಧಾಳಿ ಮಾಡಿದವು. ಮಿತ್ರರ 44 ವಿಮಾನಗಳು ಮಾತ್ರ ಹಿಂತಿರುಗಲಿಲ್ಲ.

ಸ್ವೀಡನ್ನಿನ ಮೂಲಕ ಜರ್ಮನಿಯ ಟ್ರಾಫಿಕ್ಕು ವಿಶೇಷವಾಗಿ ತಗ್ಗಿಹೋಗಿರುವದೆಂದೂ ಇನ್ನು ಕೆಲವು ದಿನಗಳಲ್ಲಿ ಆ ಅಲ್ಪವೂ ಪೂರ್ಣವಾಗಿ ನಿಂತುಹೋಗುವುದೆಂದೂ ಸ್ವೀಡಿಷ್ ವಾರ್ತೆಯು ತಿಳಿಸುತ್ತದೆ.

ಈಜಿಪ್ಟಿಗೂ ಜರ್ಮನಿಗೂ ಜಪಾನಿಗೂ ಕೆಲವು ವಿಷಯಗಳಲ್ಲಿ ಮನಸ್ತಾಪವುಟ್ಟಿರುವುದೆಂದು ಹೇಳಲಾಗಿದೆ.

ಕೈರೋದಲ್ಲಿನ ಜರ್ಮನ್ ರಾಜತಂತ್ರಜ್ಞರು ಪೂರ್ವ ಸಂಚಾರ ವರ್ತಾಡಿನಲ್ಲಿ ಬಂಗಾಳ ಮತ್ತು ಕೆನ್ಯಾಮುಂಗಳು ಅಸಾಧಾರಣವಾಗಿ ದೊರೆಯುವ ಗಣಿಗಳಿರುವಿಕೆಯನ್ನು ತಮ್ಮ ಪರಿಶೋಧನೆಗಳಿಂದ ಕಂಡುಹಿಡಿದಿರುವರು. ಸ್ಯಾಂಚಾಗಿನಲ್ಲಿ ಲಭಿಸುವ ಕ್ರೋಮಿಯಂನಲ್ಲಿ ಶೇಕಡಾ 57 ರಷ್ಟು ಅಲ್ಲಿ ಲಭಿಸುವದಂತೆ

Opera — Aryamala — 7th Week
ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ
ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು
ಒಪೆರಾ ಟಾಕೀಸ್
ಆರ್ಯಮಾಲಾ ೭ನೇ ವಾರ

ನ್ಯಾಯವಿಧಾಯಕ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂನ್ 23

ಮೂರನೇ ದಿನದ ಸಭೆಯು ಕಾರ್ಯಕಲಾಪಗಳು ಯಥಾವಿಧಿಯಂತ್ಯಾಗಿ 1 ಗಂಟೆಗೆ ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಇವತ್ತೂ ಸಹಾ ಪ್ರಶ್ನೋತ್ತರಗಳು ಬಿರುಸಾಗಿ ನಡೆದವು.

ಪ್ರಶ್ನೆ 69, ಶ್ರೀ ವಾಸುದೇವರೆಡ್ಡಿ.

ಹರಿಹರದಲ್ಲಿ ಕಬ್ಬಿಣದ ವ್ಯವಸಾಯ ಉಪಕರಣಗಳನ್ನು ಮಾಡುವಬಗ್ಗೆ ಕಿರ್ಲೊಸ್ಕರ್ ಕಂಪನಿಗೆ ಕೊಟ್ಟಿರುವ ಕಬ್ಬಿಣ ಮತ್ತು ಉಕ್ಕಿನ ದರದ ವಿಚಾರ ಮತ್ತು ಹೆಚ್ಚಿನ ರಿಯಾಯಿತಿ ವಿಚಾರದಲ್ಲಿ ನಮ್ಮ ಸಂಸ್ಥಾನದ ಅದೇ ರೀತಿಯ ಕೈಗಾರಿಕೆ ಸಂಘಕ್ಕೂ ಇದೇ ರಿಯಾಯಿತಿ ಕೊಡುವುದಿಲ್ಲವೆಂದು ಹೇಳಿರುವುದು ಯಾವ ನ್ಯಾಯ ?

ಇದರ ಸಂಬಂಧವಾಗಿ ಅನೇಕ ಉಪ ಪ್ರಶ್ನೆಗಳು ಅನೇಕರಿಂದ ಹಾಕಲ್ಪಟ್ಟವು, ಸಭಿಕರಿಗೆ ಸಮರ್ಪಕವಾಗಿ ಪ್ರತ್ಯುತ್ತರಗಳು ದೊರೆಯಿಲಿಲ್ಲವಾಗಿ ಅರ್ಧ ಗಂಟೆ ಕಾಲ ತೀಪ್ರವಾದ ಉಪಪ್ರಶ್ನೆಗಳು ಕೇಳಲ್ಪಟ್ಟವು.

ಈ ಸಮಯದಲ್ಲಿ ಅಧ್ಯಕ್ಷರು ಉಪ ಪ್ರಶ್ನೆ ಹಾಕುವ ವಿಷಯ ವಿಮರ್ಷಿಸಿ, 'ಪ್ರಿವಿಲೇಜಸ್ಸನ್ನು ಎಬ್ಯೂಸ್' ಮಾಡ ಬಾರದೆಂದರು.

ಅನಂತರ ಶ್ರೀ ಹೆಚ್. ವೆಂಕಟರಾಮಯ್ಯನವರು 'ಎಬ್ಯೂಸ್ ಆಫ್ ಪ್ರಿವಿಲೇಜ್' ಎಂಬ ಪದವು ಸರ್ವಥಾ ಈ ಸಭೆಯ ಸದಸ್ಯರ ಘನತೆಗೆ ತಕ್ಕದ್ದಲ್ಲವೆಂದೂ ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ತಿಳಿಸಿದರು. ಇದನ್ನು ಶ್ರೀ ರಾಜು ಮತ್ತು ಸಿ. ನರಸಿಂಹಯ್ಯನವರು ಪುಷ್ಟೀಕರಿಸಿ ಮಾತಾಡಿದರು.

ಅನಂತರ ಅಧ್ಯಕ್ಷರು "ಆಬ್ಯೂಸ್ ಆಫ್ ಪ್ರಿವಿಲೇಜ್" ಎಂಬ ಪದವನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ; ನಾನು ಅದನ್ನು ಯಾವ ದುರುಪಯೋಗದಿಂದಾಗಲೀ ಅವಹೇಳನಮಾಡುವದಕ್ಕಾಗಲೀ ಹೇಳಲಿಲ್ಲ. ಉಪಪ್ರಶ್ನೆ ಕೇಳುವ ಹಕ್ಕು ದುರುಪಯೋಗವಾಗಬಾರದೆಂಬ ದೃಷ್ಟಿಯಿಂದ ಹೇಳಿದ್ದೇ ಹೊರತು ಬೇರೆ ಅಲ್ಲಾ ಎಂದರು.

ಇಂಜನೀರಿಂಗ್ ಸ್ಕೂಲಿನ ಅಧಿಕಾರ ವರ್ಗ, ನ್ಯಾಷನಲ್ ವಾರ್ ಫ್ರಂಟ್ ವಿಚಾರದಲ್ಲಿ ಪ್ರಶ್ನೋತ್ತರಗಳು ನಡೆದವು.

ಇಷ್ಟು ಹೊತ್ತಿಗೆ 2 ಗಂಟೆಯಾದ್ದರಿಂದ ಅಯವ್ಯಯದ ಮೇಲೆ ಚರ್ಚೆ ಪ್ರಾರಂಭಿಸಲಾಯಿತು.

ಶ್ರೀ ಮಾದಯ್ಯನವರು ಗ್ರಾಮಾಭಿವೃದ್ಧಿ ಬಗ್ಗೆ ಮಾತಾಡಿ ಚಿಲ್ಲರೆ ತಾಪತ್ರಯ ಪ್ರಯಾಣದ ಕಷ್ಟ ಮುಂತಾದ್ದನ್ನು ವಿವರಿಸಿದರು.

ಮಿ || ಮಹಮದ್ ಸೇಟರು ತಮ್ಮ ಭಾಷಣವನ್ನು ಓದಿದರು ಶ್ರೀ ರಾಮಚಂದ್ರರಾಯರೂ ಭಾಷಣಮಾಡಿದರು.

ಸಭೆಯು 3—30 ಕ್ಕೆ ಉಪಾಹಾರಕ್ಕೆ ಮುಂದುವರಿಸಲ್ಪಟ್ಟು, 4 ಗಂಟೆಗೆ ಪುನಃ ಸೇರಿತು.

ಶ್ರೀ ಭೀಮಪ್ಪನಾಯಕರು ಯುಕ್ತವಾದ ತೀಕ್ಷ್ಣವಾದ, ಮತ್ತು ಮನಕರಗಿಸುವಂಥ ಭಾಷಣವನ್ನು ಧೈರ್ಯದಿಂದ ಮಾಡಿದರು. (ಇದರ ಸಾರಾಂಶವನ್ನು ಮುಂದೆ ಪ್ರಕಟಿಸಲಾಗುವುದು)

ಶ್ರೀ ಮನ್ನಾ ಜಿರಾವ್, ಪರೀಫ್ ಕೃಷ್ಣಭಟ್ಟರು, ಮತ್ತು ಮುತ್ತುರಾಜರೂ ಮಾತನಾಡಿದರು.

ಸಭೆಯು 6 ಗಂಟೆಗೆ, ನಾಳೆಗೆ ಮುಂದುವರಿಸಲ್ಪಟ್ಟಿತು.

ಂ ಂ

ಬೆಂಗಳೂರು ಜೂನ್ 22

ನ್ಯಾಯವಿಧಾಯಕ ಸಭೆಯು 2 ನೇ ದಿನದ ಕಾರ್ಯಕಲಾಪಗಳು ಇವತ್ತು ಮಧ್ಯಾಹ್ನ 1 ಗಂಟೆಗೆ ಜರುಗಿತು.

1 ಗಂಟೆಯ ಕಾಲ ಪ್ರಶ್ನೋತ್ತರಗಳು ನಡೆದವು. ಉಪಪ್ರಶ್ನೆಗಳೂ ಹೇರಳವಾಗಿದ್ದವು. ಇವು ಬಹು ಸ್ವಾಮ್ಯವಾಗಿ ಅಕ್ಕಿ ರಾಗಿ ಮುಂತಾದ ಆಹಾರ ಪದಾರ್ಥಗಳ ಸಂಬಂಧವಾಗಿದ್ದುವು. ಇದರ ಮೇಲಿರುವ ಹತೋಟಿ ತಪ್ಪಿಸಬೇಕೆಂದೂ, ಒಡವರಿಗೆ ಅಕ್ಕಿ ರಾಗಿ ಸುಲಭವಾಗಿ ದೊರೆಯುವಂತೆ ಮಾಡಬೇಕೆಂದೂ ಸರಕಾರದ ಆಹಾರ ಅಂಗಡಿಗಳ ಸಡಿಬೇಕೆಂದೂ, ಆದಿಕರ್ನಾಟಕರಿಗೆ ಪ್ರತ್ಯೇಕವಾಗಿ ಅಕ್ಕಿ ರಾಗಿ ಮುಂಡಿ ವಿತರ್ಣ ಮಾಡಬೇಕೆಂದೂ, ಅಕ್ಕಲು ಅಕ್ಕಿಯು ಕೀಳಾಗಿದ್ದಾಗ್ಯೂ ಬೆಲೆ ಪಲ್ಲಾಕ್ಕೆ ರೂ 26 ಕ್ಕೆ ಏರಿದೆ, ಕೊಯಮತ್ತೂರು ಸಣಕ್ಕಿಯಂತೆ ಈ ಅಕ್ಕಿ ಉತ್ತಮವಲ್ಲದಿದ್ದರೂ ಬೆಲೆ ಹೆಚ್ಚು ಮಾಡುವುದಕ್ಕೆ ಕಾರಣವೇನು, ಎಲ್ಲಿಂದ ಬರುತ್ತೆ, ಕೊಯಮತ್ತೂರು ಸಣ್ಣ ಪಲ್ಲಾಕ್ಕೆ ರೂ 23 ಇದೆ, ಇದಕ್ಕೆಲ್ಲಾ ಕಾರಣವೇನು, ಎಂದು ಅನೇಕ ವಿಧವಾದ ಉಪಪ್ರಶ್ನೆಗಳ ಸುರಮಳೆ ನಡೆಯಿತು.

ಇದಕ್ಕೆ ಉತ್ತರ ಕೊಡುವ ಬಗ್ಗೆ, ಉಪಮಂತ್ರಿಗಳಾದ ಶ್ರೀ ಶ್ರೀನಿವಾಸರವರು 1 ಗಂಟೆ ಕಾಲ ಹೋರಾಡಿದರು, ನೋಟೀಸು ಎಂದರು, ವಿಚಾರಮಾಡಿ ತಿಳಿಸುತ್ತೇನೆ ಎಂದರು. ಈ ಪ್ರಸಂಗ ಹಿಂದೆ ಕೀರ್ತಿಶೇಷರಾದ ಶ್ರೀ ಸತ್ಯಮೂರ್ತಿಯವರು ಡೆಲ್ಲಿಯ ಕೇಂದ್ರ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆಯನ್ನು ಸುರಿಸಿ ಹೋದ ಮೆಂಬರನ್ನು ಘಂಟೆಗಳ ಪ್ರಕಾರ ನಿಲ್ಲಿಸಿದ್ದು ಜ್ಞಾಪಕಕ್ಕೆ ಬರುತ್ತಿತ್ತು.

ಅನಸರದ ಠರಾವುಗಳು

ಶ್ರೀ ಎಲ್. ಎಸ್. ರಾಜು ಮುಂತಾದವರು. ಅವಶ್ಯಕವಾದ ವಿಚಾರವನ್ನು ಕೂಲಂಕುಶವಾಗಿ ವಿಮರ್ಷಿಸುವ ಬಗ್ಗೆ ಸಭೆಯ ಕಾರ್ಯಕಲಾಪಗಳನ್ನು ಮುಂದುವರಿಸಬೇಕೆಂದು ಸೂಚಿಸಿದರು—

6 ಠರಾವುಗಳು ಸೂಚಿಸಲ್ಪಟ್ಟವು. ಇವು ಸ್ಪೆಷಲ್ ಕ್ರಿಮಿನಲ್ ಕೋರ್ಟ್ ರದ್ದು ವಿಚಾರ, ರಾಜಕೀಯ ಬಂಧಿತರ ಬಿಡುಗಡೆ ವಿಚಾರ, ರೇಷ್ಮೆ ಹುಳುಗಳ ಗೂಡು ಮಾರುವ ವಿಚಾರಗಳು, ಆಹಾರಪದಾರ್ಥ ಸಾಗಿಸುವ ವಿಚಾರ ಆಹಾರಸಯಾರ್ಥಗಳನ್ನು ಸರಕಾರದವರು ವಶಪಡಿಸಿಕೊಳ್ಳುತ್ತಿರುವ ವಿಚಾರವಾಗಿದ್ದವು

ಸಭೆಯ ಲೀಡರಾದ ಶ್ರೀ ಅನಂತರಾಮಯ್ಯನವರು. ಇವು ನ್ಯಾಯಬದ್ಧವಲ್ಲವೆಂದೂ ಚರ್ಚೆಗೆ ಅತ್ಯವಶ್ಯಕವಲ್ಲವೆಂದೂ ಭಾಷಣಮಾಡಿದರು

ಹಿತದೃಷ್ಟಿಯಿಂದ ಅಧ್ಯಕ್ಷರೂ ಸಹಾ ಚರ್ಚೆಗೆ ಅವಕಾಶ ಕೊಡಲಿಲ್ಲ.

ಸುಮಾರು 3 ಗಂಟೆಗೆ ಸ್ವಲ್ಪ ಮುಂಚೆ ಅಯವ್ಯಯದ ಮೇಲೆ ಚರ್ಚೆ ಪ್ರಾರಂಭಿಯಿತು. ಉಪಾಹಾರಕ್ಕೆ ಸಭೆಯು 3-30 ಕ್ಕೆ ಮುಂದುವರಿಯಿತು. 4 ಕ್ಕೆ ಸಭೆಯು ಮತ್ತೆ ಸೇರಿ ಅಯವ್ಯಯ ಸಂಬಂಧದ ಚರ್ಚೆ ನಡೆಯಿತು. ಅನೇಕರು ಭಾಷಣ ಮಾಡಿದರು. 6 ಗಂಟೆಗೆ ಸಭೆಯು ನಾಳೆಗೆ ಮುಂದುವರಿಸಲ್ಪಟ್ಟಿತು.

Ranjit Talkies

Krishna Sudhama

24—6—43 ರಿಂದ

ಅಚ್ಚಮೆಚ್ಚಿನ ನಟನಟಿಯರು ಪಾತ್ರವಹಿಸಿರುವ ಮತ್ತು ಸಕಲರೂ ನೋಡತಕ್ಕ ಮಹೋನ್ನತ ಪೌರಾಣಿಕಚಿತ್ರ (ಕನ್ನಡ)

ಕೃಷ್ಣಸುಧಾಮ

ಎಣ

ರಣಜಿತ್ ಟಾಕೀಸಿನಲ್ಲಿ

ಪ್ರತಿ ದಿನ 3 ಆಟಗಳು

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಕೃಷ್ಣಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರತಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ